ಉಪಾಯವಾಗಿ ಬಾಯಿಬಿಡಿಸಿ, ನಂತರ ಪೋಷಕರನ್ನು ಕರೆಸಿ ಇದರ ಬಗ್ಗೆ ಪ್ರಶ್ನಿಸುವುದು, ದೈಹಿಕ ಹಲ್ಲೆಯಂಥವು ಇದ್ದರೆ ಪೊಲೀಸರಿಗೆ ತಿಳಿಸುವುದು ಮಾಡಲಾಗುತ್ತದೆಯಂತೆ. ಅಲ್ಲಿರುವ ನಮ್ಮ ಸ್ನೇಹಿತರು ತಿಳಿಸಿದ ಪ್ರಕಾರ ಪೋಷಕರನ್ನು ಕೌನ್ಸೆಲಿಂಗ್‌ಗೆ ಕರೆಸಿರುವುದೆಲ್ಲಾ ತೀರಾ ಕ್ಷುಲ್ಲಕ ದೂರುಗಳಿಗಂತೆ. ಉದಾಹರಣೆಗೆ, ಮಕ್ಕಳನ್ನು ಊಟ ಮಾಡುವಾಗ ಗದರಿದ್ದಕ್ಕೆ, ತಲೆ ಬಾಚುವಾಗ ಬೈದದ್ದಕ್ಕೆ, ತರಲೆ ಮಾಡಿದ್ದಕ್ಕೆ ಹೆದರಿಸಲು ಕೈ ಎತ್ತಿದ್ದಕ್ಕೆ, ಇತ್ಯಾದಿ ಸಣ್ಣಪುಟ್ಟ ವಿಷಯಗಳಿಗೆ. ಪುಟ್ಟ ಮಕ್ಕಳಿಗೆ ಕೌನ್ಸೆಲಿಂಗ್‌ನಲ್ಲಿ ಯಾವುದನ್ನು ಹೇಳಬೇಕು, ಯಾವುದನ್ನು ಹೇಳಬಾರದು ಎಂಬ ಅರಿವಿರದೆ, ತಂದೆ ತಾಯಿ ಗದರಿದ್ದನ್ನೆಲ್ಲಾ ಅವರಿಗೆ ತಿಳಿಸಿ, ಬಹಳಷ್ಟು ಬಾರಿ ಶಾಲೆಯ ಹತ್ತಿರ ಪೋಷಕರು ಹೋಗಬೇಕಾಗಿ ಬರುತ್ತದೆಯಂತೆ. ಒಂದೆರಡು ಬಾರಿ ವಾರ್ನಿಂಗ್ ಪಡೆದ ನಂತರ ನನ್ನ ಸ್ನೇಹಿತ ತನ್ನ ಕುಟುಂಬವನ್ನು ಭಾರತಕ್ಕೆ ಸ್ಥಳಾಂತರಿಸಿದ.

ನನ್ನ ಸ್ನೇಹಿತ ತಿಳಿಸಿದ ಇನ್ನೊಂದು ವಿಷಯ: ಒಮ್ಮೆ ಟೀನೇಜಿನ ಮಗನೊಬ್ಬ ಸಿಗರೇಟು ಸೇದಿದ್ದಕ್ಕೆ ಆತನ ಅಪ್ಪ ಕೋಪಗೊಂಡು ಒಂದೆರಡು ಬಾರಿಸಿದ್ದಾನೆ. ಅಷ್ಟಕ್ಕೇ ಆ ಹುಡುಗ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದಾನೆ. ಪೊಲೀಸರು ಆ ನತದೃಷ್ಟ ತಂದೆಯನ್ನು ಠಾಣೆಗೆ ಕರೆಸಿ, ಎಚ್ಚರಿಕೆ ಕೊಟ್ಟು, ಮತ್ತೊಮ್ಮೆ ಹೀಗೆ ಕೈ ಮಾಡುವುದಿಲ್ಲವೆಂದು ಮುಚ್ಚಳಿಕೆ ಬರೆಸಿಕೊಂಡು ಬಿಟ್ಟರಂತೆ. ಇದೇ ವಿಷಯ ನಮ್ಮ ದೇಶದಲ್ಲಿ ನಡೆದಿದ್ದರೆ ತಂದೆ ಹೊಡೆಯುವುದು ಮಾತ್ರವಲ್ಲ, ಪೊಲೀಸರು ಕೂಡ ನಾಲ್ಕು ಬಿಗಿದು ಕಳಿಸಿರುತ್ತಿದ್ದರು. ಆ ರೀತಿಯ ಮಕ್ಕಳ ರಕ್ಷಣೆ ಮಾಡುವಂತಹ ಕಾನೂನುಗಳೇನಾದರೂ ನಮ್ಮಲ್ಲಿ ಇದ್ದಿದ್ದರೆ, ಅದೂ ನಾವು ಮಕ್ಕಳಾಗಿದ್ದಂತಹ ಸಂದರ್ಭದಲ್ಲೇನಾದರೂ ಇದ್ದಿದ್ದರೆ, ನಮ್ಮ ದೇಶದ ಬಹುಪಾಲು ಪೋಷಕರು ಮತ್ತು ಶಿಕ್ಷಕರು ಒಂದಲ್ಲಾ ಒಂದು ಸಲ ಕಂಬಿ ಎಣಿಸಬೇಕಾಗುತ್ತಿತ್ತು. 'ದಂಡಂ ದಶಗುಣಂ ಭವೇತ್' ಎಂಬುದನ್ನು ಬಲವಾಗಿ ನಂಬಿರುವ ನಮ್ಮ ದೇಶದಲ್ಲಿ ಮಕ್ಕಳನ್ನು ಪೋಷಕರು ಎಷ್ಟು ಪ್ರೀತಿಸುತ್ತಾರೋ, ತಪ್ಪು ಮಾಡಿದಾಗ ಶಿಕ್ಷೆ ಕೊಡಲು ಹಿಂದೆಮುಂದೆ ನೋಡುವುದಿಲ್ಲ. ತಪ್ಪು ದಾರಿಯಲ್ಲಿ ನಡೆಯುವ ಮಕ್ಕಳನ್ನು ಸರಿದಾರಿಗೆ ತರಲು ಎರಡೇಟು ಹಾಕುವುದೂ ಕೂಡ ಪ್ರೀತಿಯ ಮತ್ತೊಂದು ರೂಪ ಎಂದು ನಂಬಿರುವ ದೇಶದವರು ನಾವು.

'ಬುದ್ಧಿವಂತನಿಗೆ ಮಾತಿನ ಪೆಟ್ಟು, ದಡ್ಡನಿಗೆ ದೊಣ್ಣೆಯ ಪೆಟ್ಟು' ಎಂಬಂತೆ ಕೆಲವು ಮಕ್ಕಳಿಗೆ ಬುದ್ಧಿ ಮಾತುಗಳು ಕಿವಿಯನ್ನು ದಾಟಿ ಮೆದುಳಿಗೆ ಹೋಗುವುದಿಲ್ಲ. ಅಂತವರಿಗೆ ಒಂದು ಏಟುಕೊಟ್ಟರೆ ಹತ್ತು ಗುಣಗಳು ಬರುತ್ತವೆ ಎಂದು ನಮ್ಮ ಪೋಷಕರು ಮತ್ತು ಶಿಕ್ಷಕರು ನಂಬಿದ್ದರು. ಆದರೆ ಕಾಲ ಬದಲಾಗುತ್ತಿದೆ, ಈಗ ಮಕ್ಕಳನ್ನು ಶಾಲೆಯಲ್ಲಂತೂ ಹೊಡೆಯುವಂತೆಯೇ ಇಲ್ಲ. ಹೊಡೆದ ಶಿಕ್ಷಕನಿಗೆ ಕೂಡಲೇ ನೋಟಿಸ್ ಬರುತ್ತದೆ. ಹಾಗಾಗಿ ಶಾಲೆಗಳಲ್ಲಿ ಇತ್ತೀಚೆಗೆ ಹೊಡೆಯುವುದು ತೀರಾ ಕಡಿಮೆ. ತರಲೆ ಮಾಡುವ ಮಕ್ಕಳನ್ನು ಪೋಷಕರು ಈಗಲೂ ದಂಡಿಸುತ್ತಾರಾದರೂ ಹಿಂದೆ ಇದ್ದಷ್ಟು ಶಿಕ್ಷೆ ಈಗ ಇಲ್ಲ. ಮೂರು ದಶಕಗಳ ಹಿಂದೆ ಇಷ್ಟೊಂದು ಟೀವಿ ಚಾನೆಲ್‌ಗಳು, ಮೊಬೈಲ್ ಫೋನ್, ಇಂಟರ್ನೆಟ್ ಇದಾವುದೂ ಇರದಿದ್ದ ಆ ಯುಗದಲ್ಲಿ ನಮ್ಮ ಪ್ರಪಂಚ ಚಿಕ್ಕದಿತ್ತು. ಆ ಚಿಕ್ಕ ಪ್ರಪಂಚದಲ್ಲಿ ಬಿಸಿ ಬಿಸಿ ಕಷ್ಟಾಯಗಳು ಶಾಲೆಗಳಲ್ಲಿ ಮತ್ತು ಮನೆಗಳಲ್ಲಿ ಯಥೇಚ್ಛವಾಗಿ ದೊರೆಯುತ್ತಿದ್ದವು. ಅಲ್ಲೇ ಡ್ರಾ, ಅಲ್ಲೇ ಬಹುಮಾನ ಸದಾ ಚಾಲ್ತಿಯಲ್ಲಿತ್ತು.

ಶಾಲೆಗಳಲ್ಲಿ ಪುಸ್ತಕ, ಚಾಕ್‌ಪೀಸ್ ಇಲ್ಲದಿದ್ದರೂ ಬೆತ್ತವಂತೂ ಎಲ್ಲಾ ಕಾಲದಲ್ಲೂ ಮೇಷ್ಟ್ರು ಕೈಯಲ್ಲಿರುತ್ತಿತ್ತು. ದುಂಡಾದ, ಕಂದುಬಣ್ಣದ ರೂಲ್‌ದೊಣ್ಣೆಯನ್ನು ಮೇಷ್ಟ್ರು



ನೋಟ್ ಪುಸ್ತಕಗಳಲ್ಲಿ, ಹಾಜರಾತಿ ಪುಸ್ತಕದಲ್ಲಿ ಉದ್ದನೆಯ ಗೆರೆ ಹಾಕಲು ಬಳಸುತ್ತಾ, ಅದನ್ನೇ ವಿದ್ಯಾರ್ಥಿಗಳನ್ನು ದಾರಿಗೆ ತರಲೂ ಕೂಡ ಬಳಸುತ್ತಿದ್ದರು. ಅದೇನಾದರೂ ಕಾರಣಾಂತರಗಳಿಂದ ಇಲ್ಲವಾದರೆ, 'ಸರಿಯಾಗಿ ಬಾರಿಸಲು ಒಂದು ಒಳ್ಳೆಯ ಕಡ್ಡಿಯನ್ನು ತನ್ನಿ' ಎಂಬ ಮೇಷ್ಟ್ರ ಆದೇಶವನ್ನು ಪಾಲಿಸಲು ವಾನರರ ಗುಂಪೇ ಸದಾ ಸನ್ನದ್ಧವಾಗಿರುತ್ತಿತ್ತು. ಗುರುಗಳ ಮಾತುಗಳನ್ನು ಪಾಲಿಸಬೇಕು ಎಂಬ ತುಡಿತಕ್ಕಿಂತ ಹೆಚ್ಚಾಗಿ ಹಾಗೆ ಕಡ್ಡಿಯನ್ನು ತಂದುಕೊಟ್ಟರೆ ಮೇಷ್ಟ್ರ ಹೊಡೆತದಿಂದ ತಪ್ಪಿಸಿಕೊಳ್ಳಬಹುದು ಎಂದಿರಬೇಕು. ಆದರೆ ಕಡ್ಡಿಯನ್ನು ತಂದುಕೊಟ್ಟವನಿಗೆ ಹಬ್ಬಗಳಲ್ಲಿ ಗ್ರಾಹಕರಿಗೆ ಅಂಗಡಿಯವನು ಕೊಡುವ ರಿಯಾಯಿತಿಯಂತೆ ಹೊಡೆತದಲ್ಲಿ ಒಂದೆರಡು ದಿನ ಡಿಸ್ಕೌಂಟ್ ಸಿಕ್ಕರೂ, ಎರಡು ದಿನದ ನಂತರ ಯಥಾಪ್ರಕಾರ ಬಡ್ಡಿಯನ್ನೂ ಸೇರಿಸಿ ಕೊಡಲಾಗುತ್ತಿತ್ತು. ಯಾವ ರೀತಿಯ ಕಡ್ಡಿಯನ್ನು ತಂದುಕೊಟ್ಟರೆ ಮೇಷ್ಟ್ರು ಸಂಪ್ರೀತರಾಗುತ್ತಾರೆ ಎಂಬ ಅರಿವು ಶಾಲೆಯಲ್ಲಿ ದಡ್ಡರು ಎಂದು ಕರೆಸಿಕೊಳ್ಳುವವರಿಗೆ ಯಥೇಚ್ಛವಾಗಿತ್ತು. ಮೇಷ್ಟ್ರು ಹೇಳಿದ ದಿನವೇ ಹೊಲಕ್ಕೆ ಹೋಗಿ, ಹೊಂಗೆಯ ಮರವನ್ನೇರಿ, ಒಂದು ಮಾರುದ್ದದ, ಗಂಟುಗಳಿಲ್ಲದೆ ನುಣುಪಾದ, ಎಳೆಯ, ಸ್ವಲ್ಪ ಬಳುಕುವಂತಹ, ಒಮ್ಮೆ ತೀಡಿದರೆ ಮೈಯಲ್ಲಿ ಬಾಸುಂಡೆ ಬರುವಂತಹ, ಒಳ್ಳೆಯ ಗುಣಮಟ್ಟದ ಕಡ್ಡಿಯನ್ನು ಹುಡುಕಿ, ಅದರಲ್ಲಿರುವ ಎಲೆಗಳನ್ನೆಲ್ಲಾ ತರಿದು, ಹೊಂಗೆಯ ಬರಲನ್ನು ಒಪ್ಪಿಸಿದರೆ, ಅದನ್ನು ಕಂಡು ಗುರುಗಳು 'ಭೇಷ್' ಎನ್ನುವಂತಿರುತ್ತಿತ್ತು. ಅದರಿಂದ ಒದೆ ತಿಂದವರು ಮಾತ್ರ ಮೈಮೇಲೆ ಬಿದ್ದಿರುವ ಬಾಸುಂಡೆಗಳನ್ನು ಸವರಿಕೊಂಡು, ಕಣ್ಣಲ್ಲಿ ನೀರು ತುಂಬಿಕೊಂಡು, ಆ ಹೊಂಗೆ ಬರಲನ್ನು ತಂದುಕೊಟ್ಟವರನ್ನು ಕೆಕ್ಕರಿಸಿಕೊಂಡು ನೋಡುತ್ತಿದ್ದರೆ, ಹೊಂಗೆ ಕಡ್ಡಿಯನ್ನು ತಂದುಕೊಟ್ಟವನ ಮುಖದಲ್ಲಿ ಸಾರ್ಥಕ ಭಾವ ಮೂಡಿಬರುತ್ತಿತ್ತು. ಮೇಷ್ಟ್ರ ಕೈಯಲ್ಲಿರುವ ಆ ಬರಲು ಬರಿಯ ಕಡ್ಡಿ ಮಾತ್ರವಾಗಿರದೇ, ಅದು ಮಂತ್ರವಾದಿಯ ಕೈಯಲ್ಲಿರುವ ಮಂತ್ರದಂಡದಂತೆ ಕೆಲಸ ಮಾಡುತ್ತಿತ್ತು. ಅದನ್ನು ಹಿಡಿದು ಮೇಷ್ಟ್ರು ಹತ್ತಿರ ಬರುತ್ತಿದ್ದರೆ ಮರೆತುಹೋಗಿದ್ದ ಮಗ್ಗಿ ತಟ್ಟನೆ ನೆನಪಿಗೆ ಬರುತ್ತಿತ್ತು. ಇನ್ನೂ ಕೆಲವರಿಗೆ ಬಾಯಿಗೆ ಬಂದ ಸರಿಯಾದ ಉತ್ತರಗಳೂ ಕೂಡ ಹೊರಗೆ ಬಾರದೆ ಶಕುಂತಲಳನ್ನು ಮರೆತ ದುಷ್ಯಂತನಂತಾಗುತ್ತಿದ್ದರು. ಆ ಮಂತ್ರದಂಡಕ್ಕೆ